**<u>ದಿನಾಂಕ: 22.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಮುಖ್ಯವಿಚಾರಣೆ: ವಾದಿ ಪರ ವಕೀಲರಿಂದ</u>**

ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ.

| ನಿಶಾನೆ | ದಾಖಲೆಗಳು |
|---|---|
| ನಿಪಿ-13 | ದಿ: 09-08-2023 ರ ಒಂದು ಪತ್ರ |
| ನಿಪಿ-14 | 1 ನೇ ಅರ್ಜಿದಾರರ ಮರಣ ಪ್ರಮಾಣ ಪತ್ರ ಧೃಡಿಕೃತ ಪ್ರತಿ |

**<u>ಪಾಟೀ ಸವಾಲುಃ : 2 ನೇ ಎದುರುದಾರರ ಪರ ವಕೀಲರಿಂದ</u>**

1) ನಾನು ನಿಪಿ-13 ರಲ್ಲಿ ನಮೂದು ಮಾಡಿರುವ ಪ್ರಕಾರ ಲೈಸನ್ಸ ಪ್ರತಿ ಸಿಕ್ಕಲಿ ಹಾಜರುಪಡಿಸಿರುತ್ತೇವೆ ಎನ್ನುವ ಕುರಿತು ಪತ್ರದ ಮೂಲಕ ವೆಸ್ಟರ್ನ ಇಂಡಿಯಾ ಅಟೋಮೊಬೈಲ ಅಸೋಸಿಯೇಷನರವರಿಗೆ ವಿಚಾರಿಸಲು ಹೋಗಿದ್ದೆ ತಮ್ಮ ಬಳಿ ಈಗ ಸದ್ಯ ಲಭ್ಯವಿಲ್ಲ ಎಂದು ಅವರು ತಿಳಿಸಿದ್ದರು. ನಿಪಿ-13 ದಾಖಲೆಯನ್ನು ನೀಡಿದ ಸಂಸ್ಥೆಯವರನ್ನು ಕರೆಸಿ ಸಾಕ್ಷಿ ಮಾಡಿಸದೇ ಇದ್ದರೆ ಸದರಿ ದಾಖಲೆಗೆ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ಈ ಮುಂದೆ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದಿರುತ್ತೇನೆ. ಆ ಸಂದರ್ಬದಲ್ಲಿ ನನ್ನ ಗಂಡನ ಲೈಸನ್ಸ ತಂದು ಹಾಜರುಪಡಿಸುತ್ತೇನೆ ಎಂದು ಹೇಳಿದೆ ಎಂದರೆ ಸರಿ. ನನ್ನ ಗಂಡನ ಲೈಸನ್ಸ ಇಲ್ಲದೇ ಇರುವ ಕಾರಣ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೆ ಸರಿ ಅದೆ**

**ಒಂದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಮ್.ಎಫ್.ಸಿ., ಬಸವನ ಬಾಗೇವಾಡಿ.**